(ಇಂದು ದಿನಾಂಕ: 16-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಡಿ.ಎಸ್.ಬಿ ವಕೀಲರಿಂದಃ**

ನಾನು ದಾವೆಯನ್ನು ದಾಖಲು ಮಾಡವ ವೇಳೆಯಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಲು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ನನ್ನ ಬಳಿ ಇರುವ ದಾಖಲಾತಿಯನ್ನು ನಾನು ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದಾವೆಯ ಸಂಗಡ ಹಾಜರು ಪಡಿಸಿದ ಕಚ್ಚಾ ನಕಾಶೆಯ ಕುರಿತಾಗಿ ನನಗೆ ಮಾಹಿತಿ ಇರುವುದಿಲ್ಲ.

ನಿಪಿ-5 ಮತ್ತು 6ರಲ್ಲಿ ಕಂಡು ಬರುವ ಬೇಲಿಗಳನ್ನು ಪ್ರತಿವಾದಿಯರು ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಾನು ಕಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ನಿಪಿ-7 ಮತ್ತು 8ರಲ್ಲಿ ಕಂಡು ಬರುವ ಪಿಚ್ಚಿಂಗ್ ಸರ್ವೇ ನಂ.1505 ಹಿಸ್ಸಾ 2 ಲಗ್ತ ಇರುವ ರಸ್ತೆಗೆ ಹಾಕಿದ ಪಿಚ್ಚಿಂಗ್

ಆಗಿರುತ್ತದೆ. ಸರ್ವೇ ನಂ.1505 ಹಿಸ್ಸಾ 2ರ ಪೂರ್ವ ದಿಕ್ಕಿಗೆ ರಸ್ತೆ ಇರುತ್ತದೆ. ಸದರಿ ರಸ್ತೆಯು ಮುಖ್ಯ ರಸ್ತೆಯಿಂದ 600 ಮೀಟರ್ ಉದ್ದದವರೆಗೆ ಇದ್ದು, ಅದು ವಿಶಾಲ ನಾಯಕ ಇವರ ಮನೆಯವರೆಗೆ ಇದೆ. ಸದರಿ ವಿಶಾಲ ನಾಯಕ ಇವರು ಕೃಷಿಕರಾಗಿರುತ್ತಾರೆ.

ಸರ್ವೇ ನಂ.1505 ಹಿಸ್ಸಾ 2ರ ಪ್ರತಿವಾದಿಯರ ಜಾಗ ಎಂದರೆ ಸರಿ. ಸದರಿ ಜಾಗವು ಒಟ್ಟು 8 ಗುಂಟೆ ಇದ್ದು, ಅದರಲ್ಲಿ 1 ಗುಂಟೆ 8 ಆಣೆ ಕರಾಬು ಕ್ಷೇತ್ರ ಉಳಿದ 6 ಗುಂಟೆ 8 ಆಣೆ ಸಾಗುವಳಿ ಜಾಗ ಎಂದರೆ ಸರಿ. ಸದರಿ ಜಾಗವು ವಾದಿಯರಿಗೆ ಅವರ ಪೂರ್ವಜರಿಂದ ಬಂದ ವಾರಿಸಾ ಆಸ್ತಿಯು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಈ ದಾವೆಯನ್ನು ದಾಖಲು ಮಾಡುವ ಪೂರ್ವದಲ್ಲಿ ಪ್ರತಿವಾದಿಯರ ಸರ್ವೇ ನಂ.1505 ಹಿಸ್ಸಾ 2ರ ಪಹಣಿ ಪತ್ರಿಕೆಯನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ ಹಾಗೂ ನಾನು ನಮ್ಮ ವಕೀಲರಿಗೆ ಸದರಿ ಸರ್ವೇ ನಂಬರ್ ಕುರಿತಾಗಿ ಸರ್ವೇ ನಕಾಶೆಯನ್ನು ನೀಡಿರುವುದಿಲ್ಲ.

ಪ್ರತಿವಾದಿಯರ ಜಾಗದ ಲಗ್ತ ಇರುವ ನನ್ನ ಹಕ್ಕಿನ ಜಾಗ ಎಂದು ನಾನು ಪ್ರತಿಪಾದನೆ ಮಾಡಿರುವ ಜಾಗವು 1 ಗುಂಟೆ 4 ಆಣೆ ಜಾಗ ಮಾತ್ರ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಇನ್ನೊಂದು ಸರ್ವೇ ನಂಬರಿನಲ್ಲಿ 3 ಗುಂಟೆ ಜಾಗ ಇದೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ದಾಖಲಿಸುವ ಸಂದರ್ಭದಲ್ಲಿ ಪ್ರತಿವಾದಿಯರ ಜಾಗದ ಲಗ್ತ ಈ 1 ಗುಂಟೆ 4 ಆಣೆ ಜಾಗವನ್ನು ಹೊರತು ಪಡಿಸಿ ಇನ್ನೊಂದು 3 ಗುಂಟೆ ಇರುವ ಜಾಗವನ್ನು ನಾನು ವಕೀಲರಿಗೆ ಮಾಹಿತಿಯನ್ನು ನೀಡಿರುವುದಿಲ್ಲ. ಇನ್ನೊಂದು 3 ಗುಂಟೆ ಜಾಗದ ಪಹಣಿ ಪತ್ರಿಕೆಯನ್ನು ನಾನು ನನ್ನ ವಕೀಲರಿಗೆ ನೀಡಿರುವುದಿಲ್ಲ. ಸದರಿ 3 ಗುಂಟೆ ಜಾಗದ ಸರ್ವೇ ನಂ.1505 ಇದ್ದು, ಅದರ ಹಿಸ್ಸಾ ನನಗೆ ನೆನಪಿಲ್ಲ. ನನ್ನ ಬಾಬ್ತು 1 ಗುಂಟೆ 4 ಆಣೆ ಜಾಗದ ಸರ್ವೇ ನಂ.1506 ಹಿಸ್ಸಾ ಡ ಆಗಿರುತ್ತದೆ. ಈ ದಾವೆಯನ್ನು ಮಾಡುವ ಪೂರ್ವದಲ್ಲಿ ನನ್ನ

ಜಾಗ ಯಾವುದು ಹಾಗೂ ಪ್ರತಿವಾದಿಯರ ಜಾಗ ಯಾವುದೇ ಸ್ಪಷ್ಟ ಕಲ್ಪನೆ ಇಲ್ಲದೇ ಈ ದಾವೆಯನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಯರ ಜಾಗಕ್ಕಿಂತ ನಮ್ಮ ಜಾಗವು ಸುಮಾರು ಒಂದೂವರೆ ಪುಟುನಷ್ಟು ತಗ್ಗಿನಲ್ಲಿ ಇದೆ ಎಂದರೆ ಸಾಕ್ಷಿಯು ಒಂದು ಪುಟುನಷ್ಟು ತಗ್ಗಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಹಾಗೂ ಪ್ರತಿವಾದಿಯರ ಜಾಗದ ನಡುವೆ ಹಾಳಿಕಂಟಾ (ಪುಣಿ) ಇತ್ತು ಎಂದರೆ ಸರಿ. ನಮ್ಮ ಹಾಗೂ ಪ್ರತಿವಾದಿಯರ ಗಡಿ ಗುರುತಿಗಾಗಿ ನಮ್ಮ ಜಾಗದ ನಡುವೆ 2013ರವರೆಗ ಗಡಿಕಲ್ಲು ಇತ್ತು ಎಂದರೆ ಸಾಕ್ಷಿಯು ನಾನು ಸುತ್ತಾಮುತ್ತಲೂ ಎಲ್ಲೂ ನಾನು ಗಡಿಕಲ್ಲನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

2013ರಲ್ಲಿ ನನ್ನ 1 ಗುಂಟೆ 4 ಆಣೆ ಜಾಗದಲ್ಲಿ ಮನೆಯನ್ನು ಕಟ್ಟಲು ಪ್ರಾರಂಭಿಸಿದ್ದೇನೆ ಎಂದರೆ ಸರಿ. ನಾನು 2013ರಲ್ಲಿ ಮನೆಯನ್ನು ಕಟ್ಟುವ ಸಂದರ್ಭದಲ್ಲಿ ನನ್ನ ಹಾಗೂ ಪ್ರತಿವಾದಿಯರ ಜಾಗದ ನಡುವೆ ಇರುವ ಗಡಿಕಲ್ಲನ್ನು ಹಾಗೂ ಹಾಳಿಕಂಟಾವನ್ನು ಕಿತ್ತು ಎಸೆದು ಪ್ರತಿವಾದಿಯರ ಜಾಗವನ್ನು ಅತೀಕ್ರಮಣ ಮಾಡಲು ಪ್ರಾರಂಭಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಅಕ್ಷರ ಜ್ಞಾನವನ್ನು ಹೊಂದಿರುವವರು ಅಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರು ಹಿಂದುಳಿದ ಹಾಲಕ್ಕಿ ಗೌಡ ಸಮಾಜದವರಿಗೆ ಸೇರಿದವರು ಎಂದರೆ ಸರಿ. ನಾನು ಪ್ರತಿವಾದಿಯವರ ಜಾಗವನ್ನು ಅತೀಕ್ರಮಣ ಮಾಡಲು ಪ್ರಾರಂಭಿಸಿದಾಗ ನನ್ನ ಬಳಿ ಕೇಳಿದ್ದು, ಆಗ ನಾನು ಸರ್ವೇ ಮಾಡಿಸುವ ಎಂದು ಅವರನ್ನು ನಂಬಿಸಿ ಸರ್ವೇಯನ್ನು ಮಾಡಿದದೇ ಪ್ರತಿವಾದಿಯರ ಜಾಗವನ್ನು ಅತೀಕ್ರಮಿಸಿ ಅಲ್ಲಿ ನಮ್ಮ ಮನೆಯ ಬಟ್ಟೆಯ ಒಗೆಯುವ ಕಲ್ಲನ್ನು ತಂದು ಇಟ್ಟಿದ್ದೇನೆ ಎಂದರೆ ಸಾಕ್ಷಿಯು ಆ ಕಲ್ಲು ಹಿಂದಿನಿಂದಲೂ ಇದ್ದು, ಅದು ನಮ್ಮ ಜಾಗದಲ್ಲಿ ಇದೆ ಎಂದು ನುಡಿಯುತ್ತಾರೆ. ಈ ರೀತಿಯಾಗಿ ನಾನು ಪ್ರತಿವಾದಿಯರನ್ನು ನಂಬಿಸಿ ಅವರ ಜಾಗವನ್ನು ಅತೀಕ್ರಮಣ ಮಾಡಲು ತೊಡಗಿರುವುದರಿಂದ ಪ್ರತಿವಾದಿಯರು ಅವರ

ಜಾಗದ ರಕ್ಷಣೆಗಾಗಿ ಬೇಲಿಗಳನ್ನು ನಿರ್ಮಿಸಿಕೊಂಡಿದ್ದರು ಎಂದರ ಸರಿಯಲ್ಲ. ಪ್ರತಿವಾದಿಯರು ತಾತ್ಕಾಲಿಕವಾಗಿ ನಿರ್ಮಿಸಿದ ಬೇಲಿಯನ್ನು ಸಹ ತುಂಡು ಮಾಡಿ ಪ್ರತಿವಾದಿಯರ ಜಾಗವನ್ನು ಅತೀಕ್ರಮಿಸಿ ಅವರ ವಿರುದ್ಧ ಸುಳ್ಳು ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ಹಾಗೂ ಪ್ರತಿವಾದಿಯರ ಜಾಗದ ಗಡಿ ಗುರುತನ್ನು ನಿಖರವಾಗಿ ಗುರುತಿಸಿ ಗಡಿಗುರುತನ್ನು ಹಾಕಿಸಿಕೊಳ್ಳಲು ನ್ಯಾಯಾಲಯದಿಂದ ಸರ್ವೇ ಆಯುಕ್ತರನ್ನು ನೇಮಿಸಲು ನನ್ನದು ಯಾವುದೇ ತಕರಾರು ಇರುವುದಿಲ್ಲ. ಈ ಕುರಿತಾಗಿ ನಾವು ಯಾವುದೇ ಅರ್ಜಿಯನ್ನು ಇಲ್ಲಿಯವರೆಗೆ ನ್ಯಾಯಾಲಯಕ್ಕೆ ಸಲ್ಲಿಸಿದ್ದು ಇರುವುದಿಲ್ಲ. ನ್ಯಾಯಾಲಯದಿಂದ ಸರ್ವೇ ಆಯುಕ್ತರನ್ನು ನೇಮಿಸಿದರೆ ಸರ್ವೇ ಗಡಿ ಗುರುತಾಗಿನ ನಿಜ ಸಂಗತಿ ತಿಳಿಯುತ್ತದೆ ಎಂದರೆ ಸರಿ. ನಾನು ಈ ಪ್ರತಿವಾದಿಯರ ಜಾಗವನ್ನು ಅತೀಕ್ರಮಿಸಿರುವುದರಿಂದ ನಾನು ಇಲ್ಲಿಯವರೆಗೆ ನ್ಯಾಯಾಲಯದಿಂದ ಸರ್ವೇ ಆಯುಕ್ತರನ್ನು ನೇಮಿಸುವ ಕುರಿತಾಗಿ ಯಾವುದೇ ಅರ್ಜಿಯನ್ನು ಸಲ್ಲಿಸಲಿಲ್ಲ ಎಂದರೆ ಸರಿಯಲ್ಲ. ಈಗಲೂ ನ್ಯಾಯಾಲಯದಿಂದ ಸರ್ವೇ ಆಯುಕ್ತರನ್ನು ನೇಮಿಸಿಕೊಂಡು ವರದಿಯನ್ನು ಸಲ್ಲಿಸಿದರೇ ನಾನು ಪ್ರತಿವಾದಿಯರ ಜಾಗವನ್ನು ಅತೀಕ್ರಮಿಸಿರುವುದು ಖಾತ್ರಿಯಾಗುತ್ತದೆ ಎಂದರೆ ಸರಿಯಲ್ಲ.

ಒಂದಾನುವೇಳೆ ನ್ಯಾಯಾಲಯದಿಂದ ಸರ್ವೇ ಆಯುಕ್ತರನ್ನು ನೇಮಕ ಮಾಡಿ ವರದಿಯನ್ನು ತರಿಸಿಕೊಂಡಾಗ ಸದರಿ ವರದಿಯಲ್ಲಿ ನಾನು ಪ್ರತಿವಾದಿಯರಿಗೆ ಸಂಬಂಧಿಸಿದ ಜಾಗವನ್ನು ಒತ್ತುವರಿ ಮಾಡಿಕೊಂಡ ಕುರಿತಾಗಿ ಗೊತ್ತಾದರೆ ನಾನು ಅದನ್ನು ಪ್ರತಿವಾದಿಯರಿಗೆ ಬಿಟ್ಟು ಕೊಡಲು ತಯಾರು ಇದ್ದೇನೆ. ನನ್ನ ಹಾಗೂ ಪ್ರತಿವಾದಿಯರ ಜಾಗದ ಸರ್ವೇ ನಕಾಶೆ ಹಾಗೂ ಗಡಿಯ ಕುರಿತು ಯಾವುದೇ ಖಚಿತ ಮಾಹಿತಿ ಇಲ್ಲದೇ ನಾನೇ ಪ್ರತಿವಾದಿಯರ ಜಾಗವನ್ನು ಅತೀಕ್ರಮಿಸಿಕೊಂಡು ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ನಾನು

ನ್ಯಾಯಾಲಯದಿಂದ ಏಕಪಕ್ಷಿಯ ಮಧ್ಯಂತರ ಆದೇಶವನ್ನು ಪಡೆದುಕೊಂಡು ಇಲ್ಲಿಯವರಿಗೂ ಪ್ರತಿವಾದಿಯರ ಜಾಗದಲ್ಲಿ ಅತೀಕ್ರಮಣವನ್ನು ಮುಂದುವರಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದಲ್ಲಿ ನಮೂದಿಸಿದಂತೆ ನನ್ನ ಹಾಗೂ ಪ್ರತಿವಾದಿಯರ ಜಾಗದ ನಡುವಿನ ಬೇಲಿಯನ್ನು ಯಾವುದೇ ಕಾಲಕ್ಕೆ ಕಿತ್ತು ಎಸೆಯಲಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಯರ ವಿರುದ್ಧ ಈ ದಾವೆಯನ್ನು ದಾಖಲಿಸಲು ಯಾವುದೇ ಕಾರಣ ಉದ್ಭವಿಸಲಿಲ್ಲ ಎಂದರೆ ಸರಿಯಲ್ಲ.

ನನ್ನ ಸ್ಥಳದ ಲಗ್ತ ವಿರುವ ಪ್ರತಿವಾದಿಯರ ಸ್ಥಳವನ್ನು ನಾನು ಈ ದಾವೆಯಲ್ಲಿ ದಾವಾ ಆಸ್ತಿಯೆಂದು ನಮೂದು ಮಾಡದೇ ಇರುವ ಕಾರಣ ಈ ದಾವೆಯು ನಡೆಯತಕ್ಕದ್ದು ಅಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆಯನ್ನು ದಾಖಲಿಸಿ ಅನಾವಶ್ಯಕವಾಗಿ ತಿರುಗಾಟ ಹಾಗೂ ಖರ್ಚಿಗೆ ದಾರಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇರುವುದಿಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ